# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ :- 09/11/2020 ರಂದು ವಾರ್ಡ್ 60ರ ವಾರ್ಡ್ ಸಮಿತಿ ಸಭೆಯ ನಡುವಳಿ

**ಸಭೆಗೆ ಹಾಜರಿದ್ದ ಅಧಿಕಾರಿಗಳು :**

1. ಶ್ರೀ. ಬಸವರಾಜು, ವಾರ್ಡ್ ಇಂಜಿನೀಯರ್
2. ಶ್ರೀ. ವೆಂಕಟೇಶ್, ಹಿರಿಯ ಆರೋಗ್ಯ ಪರೀವಿಕ್ಷಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಕಾರ್ಯದರ್ಶಿ ಅಧಿಕಾರಿ ವಾರ್ಡ್-60 ರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್-60 ರ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ನಡೆಸಲಾಯಿತು.

### ➢ ಆರೋಗ್ಯ ಇಲಾಖೆಗೆ ಸಂಬಂದಿಸಿರುವುದು

1. ವಾರ್ಡ್ ವ್ಯಾಪ್ತಿಯ ಗಾಸ್ಪಾಲ್ ಸ್ಟ್ರೀಟ್, ಹಳೇ ಬಾಗಲೂರು ಬಡಾವಣೆಯಲ್ಲಿ ಕಸ ನಿರ್ವಹಣೆ ಸರಿಯಾಗಿ ಕಾರ್ಯನಿರ್ವಹಿಸುತ್ತೀಲ್ಲ ಕೂಡಲೆ ಸಮಸ್ಯೆ ಪರಿಹರಿಸಲು ಆರೋಗ್ಯ ಪರೀವಿಕ್ಷಕರಿಗೆ ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯ ಹಳೇ ಮತ್ತು ಹೊಸ ಬಾಗಲೂರು ಲೇಔಟ್‌ನಲ್ಲಿ ಸಂಗ್ರಹವಾದ ಕಸವನ್ನು ಗಾಸ್ಪಾಲ್ ಸ್ಟ್ರೀಟ್‌ನಲ್ಲಿ ರಾತ್ರಿ ಹೊತ್ತನಲ್ಲಿ ವಿಲೇವಾರು ಮಾಡಲಾಗುತ್ತಿದೆ.
3. ವಾರ್ಡ್ ವ್ಯಾಪ್ತಿಯ ಗಾಸ್ಪಾಲ್ ಸ್ಟ್ರೀಟ್‌ನಲ್ಲಿ ಟ್ರಾಂಸ್‌ಫಾರಂ ಕಸದ ಬ್ಲಾಕ್‌ಸ್ಪಾಟಾಗಿ ಪರಿವರ್ತನೆಗೊಳ್ಳುವುದನ್ನು ತಡೆಹಿಡಿಯುವುದು.
4. ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಟೌನ್ ಸುತ್ತಮುತ್ತಲಿನ ಕನ್ಸರ್ವೆನ್ಸಿ ಲೇನ್‌ಗಳು ಕ್ಲೀನ್ ಮಾಡಲು ಸೂಚಿಸಿದರು.

**ಕ್ರಮ : ಹಿರಿಯ ಆರೋಗ್ಯ ಪರೀವಿಕ್ಷಕರು ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಸೂಚಿಸಿದರು.**

### ➢ ಬೆಸ್ಕಾಂ ಇಲಾಖೆಗೆ ಸಂಬಂದಿಸಿರುವುದು

1. ವಾರ್ಡ್ ವ್ಯಾಪ್ತಿಯಲ್ಲಿನ ಗಾಸ್ಪಾಲ್ ಸ್ಟ್ರೀಟ್‌ನಲ್ಲಿ ಹೈಟೆಂಷನ್ ವೈರ್ ಹಾದುಹೊಗಿದ್ದು ಅದರ ಕೆಳಗೆ ಮಕ್ಕಳು ಆಟವಾಡುತ್ತಿದ್ದು ಕೂಡಲೆ ಎಚ್ಚರಿಕೆ ಪಲಕೆ (Caution Board) ಯನ್ನು ಅಳವಡಿಸಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಸ್ಟ್ರೀಟ್ ಲೈಟ್ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ ಕೂಡಲೆ ಕ್ರಮ ಕೈಗೊಳ್ಳಲು ಈ ಸಭೆ ಮುಖಾಂತರ ಸೂಚಿಸಲಾಯಿತು.

- **ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು**

  1. ವಾರ್ಡ್ ವ್ಯಾಪ್ತಿಯಲ್ಲಿನ ನೀರಿನ ಸಮಸ್ಯೆಗಳನ್ನು ಕೂಡಲೆ ಪರಿಹರಿಸಬೇಕಾಗಿ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಅಸಮವಾಗಿರುವ (Uneven Surface) ಮ್ಯಾನ್ ಹೋಲ್‌ಗಳನ್ನು ಗುರುತ್ತಿಸಿ ದುರಸ್ತಿಗೊಳಿಸಲು ಈ ಸಭೆ ಮುಖಾಂತರ ಸೂಚಿಸಿದರು.

- **ಪೋಲೀಸ್ ಇಲಾಖೆಗೆ (ಸಿವಿಲ್) ಸಂಬಂದಿಸಿರುವುದು**

  1. ವಾರ್ಡ್ ವ್ಯಾಪ್ತಿಯಲ್ಲಿನ ಕೆಲವು ಜಾಗಗಳಲ್ಲಿ ಗಾಂಜಾ ಹಾಗೂ ಮದ್ಯ ಕುಡಿಯುವುದು ಕಂಡುಬಂದಿದ್ದು ಕೂಡಲೆ ಕ್ರಮ ಕೈಗೊಳ್ಳಲು ಸೂಚಿಸಿದರು.
  2. ವಾರ್ಡ್ ವ್ಯಾಪ್ತಿಯಲ್ಲಿ ಕಳ್ಳತನ ಹೆಚ್ಚಾಗುತ್ತಿದ್ದು ಪೋಲೀಸ್ ಬೀಟ್ ಹಾಕುವುದನ್ನು ಹೆಚ್ಚಿಸಲು ಅಧಿಕಾರಿ ವರ್ಗದವರಿಗೆ ಸೂಚಿಸಿದರು.

- **ಪೋಲೀಸ್ ಇಲಾಖೆಗೆ (ಟ್ರಾಫಿಕ್) ಸಂಬಂದಿಸಿರುವುದು**

  1. ವಾರ್ಡ್ ವ್ಯಾಪ್ತಿಯ ಗಾಸ್ಪಾಲ್ ಸ್ಟ್ರೀಟ್‌ನಲ್ಲಿ 10 ನೇ ಕ್ರಾಸ್ ರಸ್ತೆ ಬದಿ ವಾಹನಗಳನ್ನು (Dead Vehicals) ಕೂಡಲೆ ತೇರೆವುಗೋಳಿಸಲು ಸೂಚಿಸಿದರು.
  2. ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಪಾರ್ಕಿಂಗ್ ಮಾಡುತ್ತಿದ್ದು ಕೂಡಲೆ ಕ್ರಮ ವಹಿಸಲು ಸೂಚಿಸಿದರು

- **ಅರಣ್ಯ ಇಲಾಖೆಗೆ ಸಂಬಂದಿಸಿರುವುದು**

  1. ವಾರ್ಡ್ ವ್ಯಾಪ್ತಿಯ ಮರಗಳಲ್ಲಿ ನಿರ್ಜೀವವಾದ ರೆಂಬೆ ಕೊಂಬೆಗಳಿದ್ದು ಇವುಗಳನ್ನು ಕೂಡಲೆ ತೇರುವುಗೋಳಿಸಲು ಸೂಚಿಸಿದರು.

- **ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು**

  1. ವಾರ್ಡ್ ವ್ಯಾಪ್ತಿಯ ವಿವಾನಿ ರಸ್ತೆ ಡೆಡ್ ಎಂಡ್‌ನಲ್ಲಿ ಮರು ಡಾಂಬರೀಕರಣ ಮಾಡಲು ಸೂಚಿದರು.
  2. ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಪಾರ್ಕ್ ಶೌಚಾಲಯವನ್ನು ನವೀಕರಣಗೋಳಿಸಲು ಸೂಚಿಸಿದರು.
  3. ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಪಾರ್ಕ್ ಕಾಂಪೌಡ್‌ಗೋಡೆಯನ್ನು ನವೀಕರಣಗೋಳಿಸಲು ಸೂಚಿಸಿದರು.

4. ವಾರ್ಡ್ ವ್ಯಾಪ್ತಿಯ ರಿಚ್ವರ್ಡ್ ಪಾರ್ಕ್ ಸುತ್ತಮುತ್ತಲಿನ ಫೂಟ್ಪಾತ್‌ಗಳನ್ನು ನವೀಕರಣಗೊಳಿಸಲು ಸೂಚಿಸಿದರು.

<u>ಸೂಚನೆ</u> : 1) ಬೆಸ್ಕಾಂ ಇಲಾಖೆ 2) ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ 3) ಪೊಲೀಸ್ (ಸಿವಿಲ್) ಇಲಾಖೆ 3) ಪೊಲೀಸ್ (ಟ್ರಾಫಿಕ್) ಇಲಾಖೆ 5) ಅರಣ್ಯ ಇಲಾಖೆ, ಸದರಿ ಸೂಚಿಸಿದಂತ ಇಲಾಖೆಗಳಿಗೆ ಸಂಬಂದಿಸಿದ ಪ್ರತಿನಿಧಿಗಳು ಸಭೆಗೆ ಹಾಜರಿರದ ಕಾರಣ ಮುಂದಿನ ಸಭೆಗೆ ಕಡ್ಡಾಯವಾಗಿ ಸಾರ್ವಜನಿಕರ ಕುಂದು ಕೊರತೆಗಳನ್ನು ಚರ್ಚಿಸಲು ತಪ್ಪದೆ ಹಾಜರಾಗಲು ಸೂಚಿಸಿದೆ. ಮುಂದಿನ ಸಭೆಯ ದಿನಾಂಕವನ್ನು ವಾಟ್ಸಾಪ್ ಮುಖಾಂತರ ನಿಮ್ಮ ಗಮನಕ್ಕೆ ತರಲಾಗುವುದು ಮತ್ತು ಹಾಜರಾಗದ ಪಕ್ಷದಲ್ಲಿ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು.

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

9/11/20
ಸದಸ್ಯ ಕಾರ್ಯದರ್ಶಿ–60

ಪ್ರತಿಗಳನ್ನು:

1. ಮಾನ್ಯ ಆಡಳಿತಾಧಿಕಾರಿ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ
4. ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರೀಕಲ್) ಬಿ.ಬಿ.ಎಂಪಿ. ಮೆಯೋಹಾಲ್ ರವರ ಮಾಹಿತಿಗಾಗಿ ಸಲ್ಲಿಸಿದೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
15. ಪೊಲೀಸ್ ಇನ್ಸ್‌ಪೆಕ್ಟರ್(ಟ್ರಾಫಿಕ್) ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
16. ವಲಯ ಅರಣ್ಯಾಧಿಕಾರಿಗಳು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
17. ಕಛೇರಿ ಪ್ರತಿ.